**<u>ದಿನಾಂಕಃ 17–12–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು .</u>**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ .

**<u>ಮುಂದುವರೆದ ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಿಂದಃ</u>**

| | | |
|---|---|---|
| ನಿ.ಡಿ–1 ಮತ್ತು 2 | : | ಪ್ರತಿವಾದಿ 2 ಮತ್ತು 3 ರವರ ಶಾಲಾ ವ್ಯಾಸಾಂಗ ದೃಢೀಕರಣ ಪತ್ರ |
| ನಿ.ಡಿ–3 | : | ಹಕ್ಕು ಪತ್ರ ಫಾರ್ಮ ನಂಃ 6 ರ ದೃಢೀಕೃತ ಪ್ರತಿ |
| ನಿ.ಡಿ–4 | : | ಭೂ ನ್ಯಾಯ ಮಂಡಳಿಯ ಆದೇಶದ ದೃಢೀಕೃತ ಪ್ರತಿ |
| ನಿ.ಡಿ–5 | : | ಫಾರ್ಮ ನಂಃ 7 ರ ದೃಢೀಕೃತ ಪ್ರತಿ |
| ನಿ.ಡಿ–6 | : | ಡ ನಂಃ 2216 ರ ಮ್ಯುಟೇಶನ್ ರಿಜಿಸ್ಟರ್ ನ ದೃಢೀಕೃತ ಪ್ರತಿ |
| ನಿ.ಡಿ–7 | : | ಹಕ್ಕು ಪತ್ರಿಕೆಯ ದೃಢೀಕೃತ ಪ್ರತಿ |
| ನಿ.ಡಿ–8 | : | ಮ್ಯುಟೇಶನ್ ರಿಜಿಸ್ಟರ್ ನ ದೃಢೀಕೃತ ಪ್ರತಿ |
| ನಿ.ಡಿ–9 | : | ಸರ್ವೆ ನಂಃ 104/10 ರ ಕೈ ಬರಹ ಪಹಣಿ ಪತ್ರಿಕೆ |
| ನಿ.ಡಿ–10 | : | ಸರ್ವೆ ನಂಃ 104/10 ರ 2024–25 ನೇ ಸಾಲಿನ ಪಹಣಿ ಪತ್ರಿಕೆ |
| ನಿ.ಡಿ–11 | | ಸರ್ವೆ ನಂಃ 51/2 ರ 1966–67 ರಿಂದ 2003–04 ನೇ ಸಾಲಿನ ಕೈ ಬರಹ ಪಹಣಿ ಪತ್ರಿಕೆ |
| ನಿ.ಡಿ–12 | : | ಸರ್ವೆ ನಂಃ 51/2 ರ 2024–25 ನೇ ಸಾಲಿನ ಪಹಣಿ ಪತ್ರಿಕೆ |

ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ಶ್ರೀ. ಎನ್ ಕೆ ಕೆ ವಕೀಲರಿಂದಃ</u>**

1. ರಾಮಪ್ಪನಿಗೆ ಒಟ್ಟು 4 ಜನ ಮಕ್ಕಳು. ಅವರುಗಳೆಂದರೆ ರಂಗಪ್ಪ, ಹನುಮವ್ವ , ರಂಗವ್ವ , ಹನುಮಪ್ಪ ಆಗಿರುತ್ತಾರೆ. ನಾಗಪ್ಪ ರಂಗಪ್ಪನ ಮಗನಾಗಿರುತ್ತಾನೆ. ನಾಗಪ್ಪನಿಗೆ ಯಾವುದೇ

ಮಕ್ಕಳಿಲ್ಲದೇ ಮೃತ ಹೊಂದಿರುತ್ತಾನೆ. ನಾಗಪ್ಪನಿಗೆ ಮಕ್ಕಳಿಲ್ಲದ ಕಾರಣ ತನ್ನ ಆಸ್ತಿಯನ್ನು ತನ್ನ ಅಣ್ಣನ ಮಗ ಹನುಮಂತಪ್ಪ ತಂದೆ ರಾಮಪ್ಪ ಗೊಲ್ಲದ ರವರಿಗೆ ಡ ನಂಃ 2216 ದಿಃ26-09-1993 ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ವಾದಿಯವರು ಸದರಿ ಹನುಮಂತಪ್ಪನ ಮಕ್ಕಳು ಎಂದರೆ ಸರಿ. ಗೇಣಿ ಭೂಮಿ ಯಾರಿಗೆ ಮಂಜೂರಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಣ್ಣ ರಂಗಪ್ಪ ಹಿರಿತನ ಮಾಡುತ್ತಿದ್ದ ಎಂದು ಹೇಳುತ್ತಾರೆ. ನನ್ನ ಗಂಡನಿಗೆ ಅರ್ಧ ಎಕರೆ ಜಮೀನು ಕೊಟ್ಟು ಮದುವೆ ಮಾಡಿಕೊಟ್ಟಿದ್ದು, ನಾನು ತವರು ಮನೆಯಲ್ಲಿ ವಾಸವಾಗಿದ್ದೆನು. ನನ್ನ ಗಂಡನ ಹೆಸರು ಧರ್ಮಪ್ಪ ಹಾಲಗಿ ಆಗಿರುತ್ತದೆ. ನನ್ನ ಹಿರಿಯ ಮಗನಿಗೆ 55 ವರ್ಷ ವಯಸ್ಸಾಗಿರುತ್ತದೆ.

2. ನಾನು ಹೊಲ ನೋಡಿ 3 ವರ್ಷ ಆಗಿರುತ್ತದೆ. ನನ್ನ ಮಧ್ಯಂತರ ಅರ್ಜಿಯಲ್ಲಿ ಗಂಡನ ಹೆಸರು ಏಕೆ ಬರೆಸಿಲ್ಲ ಎಂದರೆ ಸಾಕ್ಷಿ ಯಾರು ಕೇಳಿಲ್ಲ ಅದಕ್ಕೆ ಬರೆಯಿಸಿಲ್ಲ ಎಂದು ಹೇಳುತ್ತಾರೆ. ನನ್ನನ್ನು ಮದುವೆ ಮಾಡಿ ಕುಂಚೂರು ಗ್ರಾಮ ಹರಪನಹಳ್ಳಿ ತಾಲೂಕಿಗೆ ಕೊಟ್ಟಿರುತ್ತಾರೆ. ವರಮಾನ ಇಲ್ಲದ ಕಾರಣ ನಾನು ತವರು ಮನೆಯಲ್ಲಿ ದುಡಿಯುತ್ತಿದ್ದೇನೆ. ನನ್ನ ಹಿರಿಯ ಮಗ ಕುಂಚೂರಿನಲ್ಲಿ ಹುಟ್ಟಿರುತ್ತಾನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಉದ್ದೇಶ ಪೂರ್ವಕವಾಗಿ ನನ್ನ ಗಂಡನ ಹೆಸರು ಬರೆಯಿಸಿಲ್ಲ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯಿಂದ ಆಸ್ತಿ ಮಂಜೂರಾಗುವ ಕಾಲಕ್ಕೆ ಅಂದರೆ 1980 ನೇ ಇಸ್ವಿಯಲ್ಲಿ ನಾನು ಮದುವೆಯಾಗಿ ನನ್ನ ಗಂಡನ ಮನೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಪಾಲು ಇಲ್ಲ ಎಂದರೆ ಸರಿಯಲ್ಲ. ಡ ನಂಃ 2216, ದಿಃ 26-09-1993 ರ ಮ್ಯುಟೇಶನ್ ಎಂಟ್ರಿಯನ್ನು ಇಲ್ಲಿಯವರೆಗೂ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ರೀತಿ ಮ್ಯುಟೇಶನ್ ಆದ ವಿಚಾರ ನನಗೆ ಇವತ್ತೆ ಗೊತ್ತಾಗಿರುತ್ತದೆ.

3. ನಾನು ರಾಮಪ್ಪನ ಮಗಳು ಎನ್ನುವುದಕ್ಕೆ ಶಾಲಾ ದಾಖಲೆ ತಂದು ಹಾಜರು ಪಡಿಸಿರುತ್ತೇನೆ. ನಿಡಿ-2 ದಾಖಲೆಯನ್ನು 2024 ರಲ್ಲಿ ತಂದಿರುತ್ತೇನೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ರೆವಿನ್ಯೂ ದಾಖಲೆಗಳಲ್ಲಿ ಎಲ್ಲಿಯೂ ಸಹ ನಾನು ರಾಮಪ್ಪನ ಮಗಳು ಎಂದು ನಮೂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು 3 ವರ್ಷ ಶಾಲೆಗೆ ಹೋಗಿರುತ್ತೇನೆ. 3 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹುಲಿಕಟ್ಟಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಆ ಕಾಲದಲ್ಲಿ ನಮ್ಮ ಹುಲಿಕಟ್ಟಿಯಲ್ಲಿ ಶಾಲೆ ಇರಲಿಲ್ಲ ಎಂದರೆ ಸಾಕ್ಷಿ ನೀಲಪ್ಪ ಮಾಸ್ತರ್ ಮನೆಯಲ್ಲಿಯೇ ಶಾಲೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಆಗ ಶಾಲಾ ಕಟ್ಟಡ ಇರಲಿಲ್ಲ. ನಾನು ವಿದ್ಯಾಭ್ಯಾಸ ಮಾಡುವಾಗ ನಮ್ಮ ಊರಿನಲ್ಲಿ ಸರ್ಕಾರಿ ಶಾಲೆ ಇರಲಿಲ್ಲ ಎಂದರೆ ಸರಿ. ನಿಡಿ-2 ದಾಖಲೆಯನ್ನು ನಾನೇ ಶಾಲೆಯಿಂದ ಬರೆಯಿಸಿಕೊಂಡು ಬಂದಿರುತ್ತೇನೆ. ನಿಡಿ-2 ದಾಖಲೆ ನಕಲಿ ದಾಖಲೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ನನಗೂ ಯಾವುದೇ

ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.